ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ/17/ಎಂಎಸ್ಇ1/2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 19-07-2023

## ಅಧಿಸೂಚನೆ

**ವಿಷಯ:** ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಸ್ಥಾನ ಸಹಾಯಕರು ವೃಂದದ ದಿನಾಂಕ: 31-12-2022ರಲ್ಲಿದ್ದಂತೆ ತಾತ್ಕಾಲಿಕ ಕರಡು ಜೇಷ್ಠತಾ ಪ್ರಕಟಣೆ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 182 ಎಸ್‌ಆರ್‌ಆರ್ 2011, ದಿನಾಂಕ: 06-05-2017.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 27-02-2019.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018, ದಿನಾಂಕ: 15-05-2019.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 53 ಮುನೋಸೇ(1) 2017, ದಿನಾಂಕ: 13-08-2020.

* * * * *

ಉಲ್ಲೇಖ(4)ರ ಅಧಿಸೂಚನೆಯಲ್ಲಿ ದಿನಾಂಕ: 21-12-2019 ರಿಂದ 13-08-2020ರವರೆಗೆ ಪ್ರಕಟಗೊಂಡ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರಸ್ಥಾನ ಸಹಾಯಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ: 09-02-2017 ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣಾ ಅಧಿನಿಯಮ, 2002ರ ಪ್ರಕರಣ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ-14 ಮತ್ತು 16ಕ್ಕೆ ಅಧಿಕಾರಾತೀತ (Ultra vires Articles 14 and 16 of the Constitution) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಉಲ್ಲೇಖ(1)ರ ದಿನಾಂಕ: 06-05-2017ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ ಅನುಸರಿಸಿರುವ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

ಅಂತೆಯೇ, ಉಲ್ಲೇಖ(1)ರಲ್ಲಿನ ದಿನಾಂಕ: 06-05-2017ರ ಸರ್ಕಾರದ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ

ಅನುಸರಿಸಿರುವ ಈ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ, ಅಂತಿಮ ಜೇಷ್ಠತಾ ಪಟ್ಟಿಯನ್ನು ಮೇಲೆ ಉಲ್ಲೇಖ(2)ರ ಅಧಿಸೂಚನೆಯಲ್ಲಿ ದಿನಾಂಕ: 20-12-2017ರಂದು ಹೊರಡಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ: 2368/2011 ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂಖ್ಯೆ: 1151/2018 ರಲ್ಲಿ ದಿನಾಂಕ: 10-05-2019 ರಂದು ನೀಡಿದ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 23-06-2018 ರಂದು ಪ್ರಕಟಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಸಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿರುವುದರಿಂದ, 2017ರ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(2) ಮತ್ತು (3)ರ ಸರ್ಕಾರದ ಆದೇಶಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

2017ರ ಅಧಿನಿಯಮದ ಸೆಕ್ಷನ್ 4ರಲ್ಲಿ "ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಮೀಸಲಾತಿ ಆದೇಶದಲ್ಲಿ ಉಪಬಂಧಿಸಲಾದಂತೆ ಬಡ್ತಿಯಲ್ಲಿ ಮೀಸಲಾತಿ ಆದೇಶದ ನೀತಿಗೆ ಅನುಸಾರವಾಗಿ ಸಾವಿರದ ಒಂಬೈನೂರ ಎಪ್ಪತ್ತೆಂಟರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಿಂದ ಜಾರಿಗೆ ಬರುವಂತೆ ಬಡ್ತಿ ಹೊಂದಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಸರ್ಕಾರಿ ನೌಕರರಿಗೆ ಈಗಾಗಲೇ ನೀಡಲಾಗಿರುವ ತತ್ಪರಿಣಾಮ ಜೇಷ್ಠತೆಯು ಸಿಂಧುವಾಗಿರತಕ್ಕದ್ದು ಮತ್ತು ಅದನ್ನು ಸಂರಕ್ಷಿಸತಕ್ಕದ್ದು ಹಾಗೂ ಅದನ್ನು ಭಂಗಗೊಳಿಸತಕ್ಕದ್ದಲ್ಲ" ಎಂದು ತಿಳಿಸಿದೆ.

ಈ ಹಿನ್ನೆಲೆಯಲ್ಲಿ, ಉಲ್ಲೇಖ(2) ಮತ್ತು ಉಲ್ಲೇಖ(3)ರ ಆದೇಶದ ಕಂಡಿಕೆ-8ರ ಉಪ ಕಂಡಿಕೆ(2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4, 5 ಮತ್ತು 6ನ್ನು ಸೆಕ್ಷನ್ 9ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ /ಅಂತಿಮ ಜೇಷ್ಠತಾ ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಗರಿಷ್ಠ 30 ದಿನಗಳೊಳಗಾಗಿ ಪೂರ್ಣಗೊಳಿಸತಕ್ಕದ್ದು ಎಂದು ತಿಳಿಸಿದೆ.

ಅದರಂತೆ, ಉಲ್ಲೇಖ(4)ರ ಅಧಿಸೂಚನೆಯಲ್ಲಿ ದಿನಾಂಕ: 13-08-2020 ರಂದು ಹೊರಡಿಸಿರುವ ಕೇಂದ್ರಸ್ಥಾನ ಸಹಾಯಕರ ವೃಂದದ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(2) ಮತ್ತು (3)ರ ಸರ್ಕಾರದ ಆದೇಶಗಳ ಹಿನ್ನೆಲೆಯಲ್ಲಿ ಪುನರಾವಲೋಕಿಸಿ ಪರಿಷ್ಕರಿಸಲಾಗಿದೆ.

ವರ್ಷವಾರು ಪ್ರಕಟಿಸಲಾದ ಜೇಷ್ಠತಾ ಪಟ್ಟಿಗಳಲ್ಲಿ ಕರ್ನಾಟಕ ರಾಜ್ಯದ (ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಪ್ರಕರಣ 3 ಮತ್ತು 4ನ್ನು ಅದರ ಪ್ರಕರಣ 5ರೊಂದಿಗೆ ಸಹವಾಚನ ಮಾಡಿಕೊಂಡಂತೆ ದಿನಾಂಕ: 27-04-1978 ರಿಂದ ಮೀಸಲಾತಿಯನ್ವಯ ನೀಡಲಾದ ಪದೋನ್ನತಿಗಳನ್ನು ನಿರ್ಧರಿಸಲಾಗಿದೆ. ಹಾಗಾಗಿ, ಸದರಿ ಜೇಷ್ಠತಾ ಪಟ್ಟಿಗಳಲ್ಲಿ ನೀಡಲಾಗಿದ್ದ ಅರ್ಹತಾ ದಿನಾಂಕಗಳು ಸಿಂಧುವಾಗಿದೆ.

ಆದ್ದರಿಂದ, ಉಲ್ಲೇಖ(2) ಮತ್ತು (3)ರ ಆದೇಶಗಳಲ್ಲಿನ ಸೂಚನೆಗಳನುಸಾರ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರಸ್ಥಾನ ಸಹಾಯಕರ ವೃಂದದ ಉಲ್ಲೇಖಿತ(4)ರ ದಿನಾಂಕ: 13-08-2020 ರನ್ವಯ, ದಿನಾಂಕ: 31-12-2022 ರಲ್ಲಿದ್ದಂತೆ, ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿಯನ್ನು ಈ ಮೂಲಕ

ಪ್ರಕಟಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಆಕ್ಷೇಪಣೆ/ ಸಲಹೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆಗೆ (ವಿಪತ್ತು ನಿರ್ವಹಣೆ, ಭೂಮಿ, ಯು.ಪಿ.ಆರ್.ಓ ಮತ್ತು ನೋಂ&ಮು) ಇವರಿಗೆ ಆರ್.ಪಿ.ಎ.ಡಿ. ಮತ್ತು ಇ-ಮೇಲ್ ಮೂಲಕ dosr.revenue@gmail.com ಗೆ ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ. ನಿಗದಿತ ಕಾಲಮಿತಿಯ ನಂತರ ಸ್ವೀಕರಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ಕಾಲಾವಧಿಯೊಳಗೆ ಸ್ವೀಕರಿಸುವ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Queen 19/7/23
(ಎ.ಜಿ.ವೀಣಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇ-ಗೆಜೆಟ್ ನಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿ :**

1. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ತಿಳಿಸಿದೆ.
4. ಎಲ್ಲಾ ಕೇಂದ್ರಸ್ಥಾನ ಸಹಾಯಕರುಗಳು, ನೋಂದಣಿ ಮತ್ತು ಮುದ್ರಾಂಕ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, (ವಿಪತ್ತು ನಿರ್ವಹಣೆ, ಭೂಮಿ & ಯುಪಿಓಆರ್), ಬಹುಮಹಡಿಗಳ, ಕಟ್ಟಡ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಂದಾಯ ಇಲಾಖೆ, (ವಿ.ನಿ., ಭೂಮಿ, ನೋಂ&ಮು), ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

# ಅನುಬಂಧ

**ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/17/ಎಂಎಸ್ಇ1/2023 ದಿನಾಂಕ: 19-07-2023.**

**ಕೇಂದ್ರಸ್ಥಾನ ಸಹಾಯಕರ ವೃಂದದ ದಿನಾಂಕ: 31-12-2022 ರಲ್ಲಿದ್ದಂತೆ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿ.**

| ಕ್ರ. ಸಂ. | ಹಿಂದಿನ ಅಧಿಸೂಚನೆಗಳಲ್ಲಿ ನಿಗಧಿಪಡಿಸಲಾಗಿದ್ದ ಕೇಂದ್ರಸ್ಥಾನ ಸಹಾಯಕರ ವೃಂದದ ಜೇಷ್ಠತಾ ಕ್ರ.ಸಂ | ಅಧಿಕಾರಿಯ ಹೆಸರು ಶ್ರೀಯುತರು | ಎಸ್.ಸಿ / ಎಸ್.ಟಿ | ಜನ್ಮ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಕೇಂದ್ರಸ್ಥಾನ ಸಹಾಯಕರಾದ ದಿನಾಂಕ | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | 186 | ಕೆ.ಜಿ ಚಿಕ್ಕಪೆದ್ದಣ್ಣ | | 20-04-74 | 02-08-99 | 31-08-13 | |
| | 187 | ಎಸ್. ಸಿದ್ದೇಶ್ | | 20-07-73 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| 2 | 188 | ಹೆಚ್.ಸಿ ಲೋಕೇಶ್ | | 20-06-73 | 02-08-99 | 31-08-13 | |
| | 189 | ಡಿ. ಅನುಪಮ | | 15-04-75 | 02-08-99 | 31-08-13 | ಪದೋನ್ನತಿ / ಸ್ವಯಂ ನಿವೃತ್ತಿ |
| | 190 | ಈ.ಪಿ ಮಧುಸೂದನ | | 21-05-75 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| | 191 | ಶಿವಕುಮಾರ್ ಅಪರಂಜಿ | | 01-07-75 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| | 192 | ಎಂ. ಶ್ರೀದೇವಿ | | 03-08-75 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| | 193 | ಮಹಮ್ಮದ್ ಆಲಿ | | 04-03-67 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| 3 | 194 | ಕಾಳೆ ಮಂಗಳಬಾಯಿ ಜಯವಂತ್ | ಎಸ್.ಸಿ | 01-06-73 | 02-08-99 | 31-08-13 | |
| | 195 | ಎನ್ ಶ್ರೀನಿಧಿ | ಎಸ್.ಸಿ | 02-07-75 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |

| | | | | | | | |
|---|---|---|---|---|---|---|---|
| 4 | 196 | ಪ್ರತಿಭಾ ಆರ್ ಬಿಡೀಕರ್ | ಎಸ್.ಸಿ | 22-07-74 | 02-08-99 | 31-08-13 | |
| 5 | 197 | ಎಂ.ಎ ಮಾಬುನ್ನೀಸಾಬೇಗಂ | ಎಸ್.ಸಿ | 21-04-76 | 02-08-99 | 31-08-13 | |
| 6 | 198 | ಸಿ.ವಿ ಸುಮನ | ಎಸ್.ಸಿ | 26-10-71 | 02-08-99 | 31-08-13 | |
| | 199 | ಸವಿತ ಲಕ್ಷ್ಮಿ ಪಿ ಬೆಳಗಲಿ | | 09-05-74 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| 7 | 200 | ಮಧುಮಾಲತಿ | | 17-07-75 | 02-08-99 | 31-08-13 | |
| | 201 | ಇಮ್ತಿಯಾಜ್ ಅಹಮದ್ | | 01-06-59 | 02-08-99 | 31-08-13 | ವಯೋನಿವೃತ್ತಿ |
| | 202 | ಎಸ್. ಬಿ.ಡವಳೇಶ್ವರ್ | | 21-07-69 | 02-08-99 | 31-08-13 | ಪದೋನ್ನತಿ ಹೊಂದಿರುತ್ತಾರೆ |
| 8 | 203 | ಮಹಮದ್ ಅಬ್ದುಲ್ ಹಸೀಬ್ | | 20-06-73 | 31-01-03 | 31-08-13 | |
| 9 | 204 | ಬಿ. ಶ್ರೀಕಾಂತ್ | | 23-05-66 | 03-09-93 | 17-06-19 | |
| | 205 | ಬಿ.ಇ ಸತೀಶ್ | | 10-07-58 | 21-09-93 | 17-06-19 | ವಯೋನಿವೃತ್ತಿ |
| | 206 | ಕೆ. ಕೃಷ್ಣಪ್ಪ | ಎಸ್.ಟಿ | 01-08-56 | 22-11-82 | 17-06-19 | ವಯೋನಿವೃತ್ತಿ |
| 10 | 207 | ದ್ರಾಕ್ಷಾಯಿಣಿ ಗುರುಪಾದ ಮಠ | | 01-7-75 | 11-12-03 | 17-06-19 | |
| 11 | 208 | ಮಲ್ಲಿಕಾರ್ಜುನ ಹೆಚ್ | | 01-07-68 | 11-12-03 | 17-06-19 | |
| 12 | 209 | ಟಿ.ಕೆ.ಓ ಕರಿಯಮ್ಮ | | 01-05-76 | 29-09-04 | 17-06-19 | |
| 13 | 210 | ವಿ.ಎಸ್ ಘೋರ್ಪಡೆ | | 31-08-73 | 05-12-96 | 17-06-19 | |
| 14 | 211 | ಮಾರುತಿ ಭೀಮಪ್ಪ ದುಮ್ಮಾಳ್ | | 14-10-67 | 30-01-97 | 17-06-19 | |
| | 212 | ಪಿ.ರಘುರಾಂ | (ಎಸ್.ಸಿ) | 09-06-58 | 27-09-82 | 17-06-19 | ವಯೋನಿವೃತ್ತಿ |
| | 213 | ಎಸ್.ಆರ್ ಪ್ರೇಮಕುಮಾರಿ | | 12-02-59 | 27-09-92 | 17-06-19 | ವಯೋನಿವೃತ್ತಿ |

19/7/23

**(ಎ.ಜಿ.ವೀಣಾ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)